ದಿನಾಂಕ: 05.11.2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ. ಜಿಕೆ ವಕೀಲರಿಂದ ವಾದಿ ಪರವಾಗಿ:

ನನ್ನ ಮುಖ್ಯ ವಿಚಾರಣೆಯಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತದೆ.

ಒಂದು ಶುದ್ದ ಕ್ರಯಪತ್ರವನ್ನು ಮತ್ತು ಎರಡು ದಾನಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ:1 ರಿಂದ ನಿಪಿ:3 ಎಂದೂ, ಒಂದು ಋಣಭಾರ ಪ್ರಮಾಣಪತ್ರವನ್ನು ಹಾಜರುಪಡಿಸಿರುತ್ತೇನ ಅದನ್ನು ನಿಪಿ:4 ಎಂದೂ, ಒಂದು ಖಾತಾ ದೃಡೀಕರಣ ಪತ್ರ ಮತ್ತು ಒಂದು ಖಾತಾ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ:5 ಮತ್ತು 6 ಎಂದೂ, ಎರಡು ತೆರಿಗೆ ಪಾವತಿ ರಶೀದಿಗಳನ್ನು ಹಾಜರುಪಡಿಸಿರುತ್ತೇವೆ ಅವುಗಳನ್ನು ನಿಪಿ:6 ರಿಂದ 8 ಎಂದು ಗುರುತಿಸಲಾಯಿತು. ವಕೀಲರ ಮೂಲಕ ಕೊಟ್ಟಿರುವ ನೋಟೀಸಿನ ಕಚೇರಿ ಪ್ರತಿ ಮತ್ತು ಅಂಚೆ ರಶೀದಿ ಹಾಗೂ ಸ್ವೀಕೃತಿಯನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿ:9 ರಿಂದ 11 ಎಂದೂ, ಪ್ರತಿವಾದಿಯು ವಕೀಲರ ಮೂಲಕ ಕೊಟ್ಟಿರುವ ನೋಟೀಸಿನ ಉತ್ತರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ:12 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಲು ಪ್ರಾರ್ಥನೆ.

ಪಾಟೀಸವಾಲು: ಶ್ರೀ.ಎಸ್‌ಎಮ್ ವಕೀಲರಿಂದ

ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ